

ಅರೆ! ಗಂಗಕ್ಕ ಕಣ್ಣರಳಿಸಿ ನೋಡಿದಳು. ಆಕೆ ಆ ದಿನ ಮನೆಗೆ ಮರಳಿ ಬರುತ್ತಿದ್ದಂತೆಯೇ ಮನೆ ಪಕ್ಕದ ಗುಡ್ಡೆಯ ಮೇಲೊಂದು ಮರಕ್ಕೆ ದೊಡ್ಡ ಲೈಟಿನ ಬಲ್ಬೊಂದು ಉರಿಯುತ್ತಾ ತೂಗಾಡುತ್ತಿತ್ತು. ಆ ಮಂದ ಬೆಳಕಿನಲ್ಲಿ ಒಂದಿಷ್ಟು ಆಕೃತಿಗಳ ಓಡಾಟ ಅಸ್ಪಷ್ಟವಾಗಿ ಕಾಣಿಸುತ್ತಿತ್ತು, ಜೊತೆಗೊಂದಿಷ್ಟು ಕ್ಷೀಣ ದನಿಗಳು.

'ಮೊನ್ನೆ ಜಡ್ಡಿಗದ್ದೀಗೆ ಹೋಪಕ್ಕಾರೆ ಇಲ್ಲೆಲ್ಲಾ ಸಮಾ ಇತ್ತು. ಇದೆಂತದ್ದಪಾ! ಎಂತೆಂತೋ ಕಾಣ್ತು' ಎಂದು ಗಟ್ಟಿಯಾಗಿ ಹೇಳಿಕೊಳ್ಳುತ್ತಾ ತೂಗುತ್ತಿದ್ದ ಲೈಟಿನತ್ತಲೇ ಹುಬ್ಬು ಕೂಡಿಸಿ, ಕಣ್ಣು ಕಿರಿದಾಗಿಸಿ ನೋಡಿದ ಗಂಗಕ್ಕ, ನಿಡಿದಾದ ಶ್ವಾಸವೊಂದನ್ನು ಹೊರಹಾಕಿ ಕೈಯಲ್ಲಿದ್ದ ಮಿಣುಕು ಬ್ಯಾಟರಿಯ ನೆರವಿನಿಂದ ತನ್ನ ಸಂಚಿಯಲ್ಲಿದ್ದ ಮನೆಯ ಕೀಲಿಕೈ ಹುಡುಕತೊಡಗಿದಳು. ಮನೆಯೊಳಗೆ ಅಡಿಯಿಟ್ಟು, ತಡಸುತ್ತಾ ಬಲ್ಬಿನ ಸುಚ್ಚು ಅದುಮಿದರೆ ಫಕ್ಕನೆ ಬಲ್ಬು ಬರ್ನಾಗಬೇಕೆ. 'ಥೋ! ಮತ್ತೆ ಹೋತಾ. ಈ ಸುಡುಗಾಡು ಲೈಟೂ ನಮ್ಮಾಂಗೇಯ. ಇದ್ರೊಂದು ನಮ್ಮಿ ತಾಪಾತ್ರಯ, ಇಲ್ಲದ್ರೆ ಇನ್ನೊಂದ್ ನಮ್ನಿ' ಎಂದು ಬೈಯ್ಯುತ್ತಾ ಮತ್ತೊಂದು ದೀಪ ಹಾಕಿದಳು. ಮನೆಯಲ್ಲಿ ಪದೇ ಪದೇ ಹೋಗುತ್ತಿರುವ ಲೈಟಿನ